https://www.uomonline.com

**73211** **M-596**

Sl.No. **Total No. of Pages : 3**

# ಮೂರನೆಯ ಚತುರ್ಮಾಸ ಬಿ.ಎಸ್ಸಿ./ಬಿ.ಎಸ್ಸಿ.(ಕುಟುಂಬ ಮತ್ತು ಸಾಮುದಾಯಕ ವಿಜ್ಞಾನ) ಬಿ.ಸಿ.ಎ. (ಗಣಕ ವಿಜ್ಞಾನ) ಪರೀಕ್ಷೆ, ಮಾರ್ಚ್/ಏಪ್ರಿಲ್ 2021

## (ಚತುರ್ಮಾಸ ಸ್ಕೀಮ್ : ಸಿಬಿಸಿಎಸ್) (2019-20 ಮತ್ತು 2020-21 ರ ವಿದ್ಯಾರ್ಥಿಗಳಿಗೆ)

## ಕನ್ನಡ ಭಾಷೆ (ಪತ್ರಿಕೆ-೨)

## ವಿಜ್ಞಾನ ಗಂಗೋತ್ರಿ-೨

ಸಮಯ: 3 ಗಂಟೆಗಳು ಗರಿಷ್ಠ ಅಂಕಗಳು : 80

https://www.uomonline.com

https://www.uomonline.com

### ಕಾವ್ಯಭಾಗ-೧ (50 ಅಂಕಗಳು)

ಪ್ರ1) ಅ) ಒಂದು ಪದ್ಯಭಾಗದ ಭಾವವನ್ನು ಸಂದರ್ಭಸಹಿತ ವಿವರಿಸಿ: **[5]**

೧) ವಂಚನೆ ಇಲ್ಲದುದೇ ಭಕ್ತಿ
ಗುರು ಲಿಂಗ ಜಂಗಮ ಒಂದೆಂದರಿವುದೇ ಜ್ಞಾನ
ಆಶೆಯಿಲ್ಲದುದೇ ವೈರಾಗ್ಯ, ಪ್ರಸಾದ ಕೇವಲ ಮುಕ್ತಿ
ಇದು ಸತ್ಯ, ನಿತ್ಯ ಶಿವ ಬಲ್ಲನಯ್ಯಾ
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ

೨) ಅವಳು ನಿನಗೊಲಿವಂತೆ ಮಾಡುವೆ
ಶಿವನ ಕೃಪೆ ನಿನಗುಂಟು ನಮ್ಮಲಿ
ಸವಡಿನುಡಿಯಲ್ಲರಸ ನಂಬುವುದೆನ್ನ ನೀನೆನಲು
ಅವನಿಪತಿ ನಸುನಗುತ ಹಂಸೆಯ
ಸವಿನುಡಿಗೆ ಮನಸೋತು ವಿರಹದ
ತವಕದಲಿ ಹೇವರಿಸಿ ನುಡಿದನು ನೃಪತಿ ಖಗಪತಿಗೆ

ಆ) ಒಂದು ವಾಕ್ಯದಲ್ಲಿ ಉತ್ತರಿಸಿ: **[5×1=5]**

೧) ಅಕ್ಕಮಹಾದೇವಿಯ ವಚನದ ಅಂಕಿತವೇನು?

೨) 'ಕಿನ್ನರಯ್ಯನ ಉಳ್ಳಿ ಪ್ರಸಂಗ' ಹರಿಹರ ಕವಿಯ ಯಾವ ಕಾವ್ಯದಿಂದ ಆರಿಸಿದೆ?

೩) ಕಾವೇರಿಯಿಂದ ಎಲ್ಲಿಯವರೆಗೆ ಕನ್ನಡನಾಡಿನ ಭೂವಿಸ್ತೀರ್ಣ ಹಬ್ಬಿತ್ತು?

೪) 'ಮಳೆಯದಯಾಮಾಡೊರಂಗ' ಎಂದು ಮೊರೆಯಿಟ್ಟ ಕವಿ ಯಾರು?

೫) ಕನಕದಾಸರ ಮೂಲ ಹೆಸರೇನು?

*P.T.O.*

https://www.uomonline.com

https://www.uomonline.com



ಪ್ರ2) ಮೂರು ವಾಕ್ಯಗಳನ್ನು ಸಂದರ್ಭಸಹಿತ ವಿವರಿಸಿ: [3×4=12]

೧) ಗುರು ಲಿಂಗ, ಜಂಗಮ ಒಂದೆಂದರಿವುದೇ ಜ್ಞಾನ.

೨) ಕೈಸದರದವರನು ಕೊಲುವುದೇನರಿದೆಂದುದಾ ಪಕ್ಷಿ.

೩) ಸಾರಗುಣಗ್ರಾಹಿ ರಸಿಕರಲ್ಲದೆ ದುರ್ವಿಕಾರಿಗಳಿಲ್ಲಾ ನೆಲದೊಳು.

೪) ಸಂದು ಹೋದವು ಜ್ಯೇಷ್ಠ ಆಷಾಡ ಶ್ರಾವಣ.

೫) ಜ್ಞಾನದ ನಡಿ ಬ್ಯಾರೆ ತತ್ತ್ವಜ್ಞಾನದ ನಡಿ-ಬ್ಯಾರೆ.

ಪ್ರ3) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ: [2×2=4]

ಅ) ಕಿನ್ನರಯ್ಯ, ಉರಿಲಿಂಗ ಪೆದ್ದಿ; ದಮಯಂತಿ, ಹರಿದಾಸರು.

ಆ) ಒಂದು ವಿಷಯವನ್ನು ಕುರಿತಂತೆ ಸ್ವಂತ ಅಭಿಪ್ರಾಯಗಳನ್ನು ಬರೆಯಿರಿ. [1×4=4]

೧) ವಚನಗಳಲ್ಲಿ ಸಾಮಾಜಿಕ ವಿಡಂಬನೆ.

೨) ಕನ್ನಡ ನಾಡು-ನುಡಿ.

ಪ್ರ4) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ಕಿನ್ನರಿ ಬೊಮ್ಮಯ್ಯ ನನ್ನು ಮೆಚ್ಚಿಸುವ ಮೂಲಕ ಬಸವಣ್ಣನವರು ತಮ್ಮ ಸಹಿಷ್ಣುತಾ ಗುಣವನ್ನು ಮೆರೆದ ಬಗೆ ಹೇಗೆ? ವಿವರಿಸಿ.

೨) ತನ್ನ ಕಾಲದ ಕನ್ನಡ-ನಾಡಿನ ವೈಭವವನ್ನು ನಂಜುಂಡ ಕವಿ ಹೇಗೆ ಬಣ್ಣಿಸಿದ್ದಾನೆ?

ಪ್ರ5) ಎರಡು ಪ್ರಶ್ನೆಗೆ ಉತ್ತರಿಸಿ: https://www.uomonline.com [2×5=10]

೧) ನಳನನ್ನು ಕುರಿತು ಹಂಸಪಕ್ಷಿ ಹೇಳಿದ ಮಾತುಗಳೇನು?

೨) ಸಮಚಿತ್ತದ ಅಗತ್ಯವನ್ನು ಅಕ್ಕಮಹಾದೇವಿ ತನ್ನ ವಚನಗಳಲ್ಲಿ ಹೇಗೆ ಪ್ರತಿಪಾದಿಸಿದ್ದಾಳೆ?

೩) ಜಾತಿವ್ಯವಸ್ಥೆಯ ಕರಾಳತೆಯನ್ನು ತತ್ತ್ವಪದಕಾರ ಹೇಗೆ ವಿಡಂಬಿಸಿದ್ದಾನೆ.

೪) "ಜ್ಞಾನದ ಅರಿವನ್ನು ಪಡೆಯುವ ಬಗೆಯನ್ನು" ಮಹಿಪತಿ ದಾಸರು ತಿಳಿಸಿದ ಬಗೆ.

**ಕಥನ ಭಾಗ (30 ಅಂಕಗಳು)**

ಪ್ರ6) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) ರೆಡ್ ಇಂಡಿಯನ್ ಬುಡಕಟ್ಟು ನಾಯಕ ಮಾಡಿದ ಭಾಷಣದಲ್ಲಿ ವ್ಯಕ್ತಗೊಂಡಿರುವ ತಾಯ್ನೆಲದ ಕುರಿತ ಉತ್ಕಟ ಪ್ರೇಮವನ್ನು ಕುರಿತು ಬರೆಯಿರಿ.

೨) ಕಡಲಿನ ಗರ್ಭದ ವೈವಿಧ್ಯತೆಯನ್ನು ತಮ್ಮ ಕಥನ ಭಾಗದಲ್ಲಿ ಲೇಖಕರು ವಿವರಿಸಿದ ಬಗೆ ಹೇಗೆ?



https://www.uomonline.com

https://www.uomonline.com

https://www.uomonline.com

https://www.uomonline.com



ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ: [10]

೧) 'ಸಂತೆ' ಒಂದು ಪ್ರದೇಶದ ಸಂಸ್ಕೃತಿ ಮತ್ತು ಜೀವನ ಶೈಲಿಯ ಪ್ರತೀಕ; ನಾನ್ಯಾರಿಗಲ್ಲದವಳು......ಪ್ರಬಂಧದ ಹಿನ್ನಲೆಯಲ್ಲಿ ವಿವರಿಸಿ.

೨) ವಿಕಲಚೇತನ ಮಗುವನ್ನು ಸಾಮಾನ್ಯ ಚೇತನವಾಗಿಸಲು ಪೋಷಕರು ಮಾಡುವ ಅತ್ಯಂತಿಕ ಪ್ರಯತ್ನ 'ಅಮ್ಮ ಎಂದರೆ ಅಮ್ಮ ಮಾತ್ರ' ಪ್ರಬಂಧದಲ್ಲಿ ಹೇಗೆ ಚಿತ್ರಿತಗೊಂಡಿದೆ?

ಪ್ರ8) ಎರಡನ್ನು ಕುರಿತು ಸಂಕ್ಷಿಪ್ತವಾಗಿ ಉತ್ತರಿಸಿ: [2×5=10]

೧) ರಾಮ ರಾವಣರ ಯುದ್ಧ ಪ್ರಬಂಧದ ಸ್ವಾರಸ್ಯ.

೨) ಕಡಲಸೌತೆ ಎಂದು ಕರೆಯಲಾಗುವ ಜೀವಿಯ ಪರಿಚಯ.

೩) ಅಮ್ಮನ ತ್ಯಾಗ ಮತ್ತು ತಾಳ್ಮೆ ಪ್ರಬಂಧದಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ?

೪) ಬುಡಕಟ್ಟು ಸಮುದಾಯದ ಜೀವನ ಪ್ರೀತಿ 'ಚಿಗುರೊಡೆಯುತ್ತಿರುವ ಗಿಡದ ತನ್ಮಯತೆ' ಪ್ರಬಂಧದಲ್ಲಿ ಹೇಗೆ ನಿರೂಪಿತಗೊಂಡಿದೆ?

✡ ✡ ✡

https://www.uomonline.com
https://www.uomonline.com
https://www.uomonline.com
Whatsapp @ 9300930012
Send your old paper & get 10/-
अपने पुराने पेपर्स भैजे और 10 रुपये पायें,
Paytm or Google Pay से
https://www.uomonline.com